


# ದಂತ ವೀರ..!

64 ವಸಂತಗಳನ್ನು ದಾಟಿದ ಆಂಡ್ರೆಸ್ ಗಾರ್ಡಿನ್ ತನ್ನ ಹಲ್ಲುಗಳಿಂದ ತೆಂಗಿನ ಕಾಯಿಗಳನ್ನು ಸುಲಿಯುತ್ತಾ ಅದರಲ್ಲೇ ಗಿನ್ನೆಸ್ ವಿಶ್ವ ದಾಖಲೆಯನ್ನು ಮಾಡುವ ಹುಮ್ಮಸ್ಸಿನಲ್ಲಿದ್ದಾನೆ. ಪನಾಮದ ಉತ್ತರಕ್ಕೆ 100 ಕಿಲೋ ಮೀಟರ್ ದೂರದಲ್ಲಿರುವ ಕೋಲೊನ್‌ನಲ್ಲಿ ಈತ ತನ್ನ ದಂತ ಸಾಹಸವನ್ನು ಸಾರ್ವಜನಿಕರೆದುರು ಸಾಬೀತುಪಡಿಸಿದ್ದಾನೆ.

ಲಾರಿ ಡ್ರೈವರ್ ಆಗಿ ಕೆಲಸ ಮಾಡುತ್ತಿರುವ ಈತ ಗಟ್ಟಿ ಕವಚದ ತೆಂಗನ್ನು ತನ್ನ 11 ನೇ ವಯಸ್ಸಿನಿಂದಲೇ ಸುಲಿಯಲು ಶುರು ಮಾಡಿದನಂತೆ. 'ಕೊಕೊನಟ್ ಪೀಲರ್' ಎಂಬ ಹೆಸರಿನಿಂದ ಕರೆಯಲ್ಪಡುವ ಈತ ಇದುವರೆಗೂ ಬರೋಬ್ಬರಿ 1,00,000 ಕಾಯಿಗಳನ್ನು ತನ್ನ ಬಾಯಿಯಿಂದಲೇ ಸುಲಿದಿದ್ದಾನೆ. ತನ್ನ ಕೈ ಮತ್ತು ಕಾಲುಗಳನ್ನು ಮಾತ್ರ ಉಪಯೋಗಿಸಿಕೊಂಡು 500 ಕಾಯಿಗಳನ್ನು ಕೇವಲ 6 ಗಂಟೆಗಳಲ್ಲಿ ಈತ ಸುಲಿಯಬಲ್ಲ. ತನ್ನ ಉಕ್ಕಿನ ದಂತಗಳಿಂದ ಬರೀ ತೆಂಗಿನ ಕಾಯಿಯನ್ನು ಸುಲಿಯುವುದಷ್ಟೇ ಅಲ್ಲ, ರಿಯೋ ಅಲೆಜಾಂಡ್ರೊ ನಗರದಲ್ಲಿ 2 ಕಾರುಗಳನ್ನು ತನ್ನ ಹಲ್ಲುಗಳಿಂದಲೇ ಎಳೆದು ತೋರಿಸಿ ಜನರಿಂದ ಭೇಷ್ ಎನ್ನಿಸಿಕೊಂಡಿದ್ದಾನೆ.

'ತೆಂಗಿನ ಕಾಯಿಯನ್ನು ಸುಲಿಯುವುದು ನೀವಂದುಕೊಂಡಷ್ಟು ಸುಲಭದ ಕೆಲಸವೇನಲ್ಲ. ಇದಕ್ಕೆ ದವಡೆ ಶಕ್ತಿಯುತವಾಗಿರಬೇಕು ಹಾಗೂ ಹಲ್ಲುಗಳೂ ಗಟ್ಟಿಯಾಗಿರಬೇಕು. ಇದಕ್ಕಿಂತ ಹೆಚ್ಚಾಗಿ ದೇವರ ದಯೆಯೂ ಇರಬೇಕು' ಎನ್ನುವುದು ಈ ದಂತ ವೀರನ ಮನದಾಳದ ಮಾತು.

■ ವಿನಯ್‌ಕುಮಾರ್ ಬಿ.ಹೆಚ್

